ಓ.ಎಸ್. ನಂ. 39/2017
ಪಿ.ಡಬ್ಲ್ಯೂ-1

(ಇಂದು ದಿಃ 03-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು **:-D-1(a to c)** ಮತ್ತು **2** ನೇ ಪ್ರತಿವಾದಿ ಪರ ಶ್ರೀ.**BSS** ವಕೀಲರಿಂದ **:-**

ಸರ್ವೆ ನಂ. 119 ರ ಒಟ್ಟು ವಿಸ್ತೀರ್ಣ ಒಟ್ಟು 14 ಎಕರೆ. ಸರ್ವೆ ನಂ. 121 ಒಟ್ಟು 8 ಎಕರೆ ಇದೆ. ದಾವಾ ಐಟಂ ನಂ, 1 ರ ಚೆಕಬಂದಿ ಪೂರ್ವಕ್ಕೆ ಲಕ್ಷ್ಮಿಕಾಂತ ರವರ ಜಮೀನು ಪಶ್ಚಿಮಕ್ಕೆ ಭಾವೇಶ ರವರ ಜಮೀನು, ಉತ್ತರಕ್ಕೆ ನನ್ನ ಜಮೀನು, ದಕ್ಷಿಣಕ್ಕೆ ವೆಂಕಟರಾಮ ರೆಡ್ಡಿ ರವರ ಜಮೀನು ಇದೆ. ದಾವಾ ಐಟಂ ನಂ.2 ರ ಚೆಕಬಂದಿ ಪೂರ್ವಕ್ಕೆ ವೆಂಕಟರಾಮ ರೆಡ್ಡಿ ಪಶ್ಚಿಮಕ್ಕೆ ಕೃಷ್ಣರೆಡ್ಡಿ ಉತ್ತರಕ್ಕೆ ನರಸಪ್ಪ ಮತ್ತು ದಕ್ಷಿಣಕ್ಕೆ ನನ್ನ ಉಳಿದ ಜಮೀನು ಇದೆ. ನನ್ನ ತಾತ ನಾಗಪ್ಪ ಎಂದರೆ ಸರಿ. ನನ್ನ ತಾತನಿಗೆ ಇಬ್ಬರು ಮಕ್ಕಳು ಅವರುಗಳೆಂದರೆ ಪೆದ್ದ ನರಸರೆಡ್ಡಿ ಮತ್ತು ಚಿನ್ನನರಸರೆಡ್ಡಿ ಎಂದರೆ ಸರಿ. ಪೆದ್ದ ನರಸರೆಡ್ಡಿ ನನ್ನ ತಂದೆ ಎಂದರೆ ಸರಿ. ಪೆದ್ದ ನರಸರೆಡ್ಡಿ ಮತ್ತು ಚಿನ್ನನರಸರೆಡ್ಡಿ ಇಬ್ಬರು ಬೇರೆ ಬೇರೆ ಆಗಿದ್ದರು ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ಸರ್ವೆ ನಂ. 119 ರಲ್ಲಿ 7 ಎಕರೆ 6 ಗುಂಟೆ ಚಿನ್ನ ನರಸರೆಡ್ಡಿ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ. 119 ರಲ್ಲಿ 7 ಎಕರೆ 7 ಗುಂಟೆ ನನ್ನ ತಂದೆ ಪೆದ್ದ ನರಸರೆಡ್ಡಿ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ. 121 ರಲ್ಲಿ ಚಿನ್ನ ನರಸರೆಡ್ಡಿ 5 ಎಕರೆ ಮತ್ತು ಪೆದ್ದ ನರಸರೆಡ್ಡಿ ಗೆ 3 ಎಕರೆ 24 ಗುಂಟೆ ಭಾಗಕ್ಕೆ ಬಂದಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ಭಾಗಕ್ಕೆ ಬಂದಿದ್ದ 7 ಎಕರೆ 7 ಗುಂಟೆ ಜಮೀನನ್ನು ನನ್ನ ತಂದೆ ನನ್ನ ತಾಯಿ ಈರಮ್ಮಳ ಹೆಸರಿಗೆ ಮಾಡಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ತಾಯಿ ಹೆಸರಿಗೆ ಮಾಡಿದ್ದಾರೆ ಎಂದು ಹೇಳುತ್ತಾರೆ. ಮುಟೇಷನ ನಂ 28/1980-81 ರ ಪ್ರಕಾರ ನನ್ನ ತಂದೆಯಿಂದ ನನ್ನ ತಾಯಿ ಹೆಸರಿಗೆ 7 ಎಕರೆ 7 ಗುಂಟೆ ಬಂದಿತ್ತು ಎಂದರೆ ಸರಿಯಲ್ಲ. ತದನಂತರ ನಾನು ಮತ್ತು ನನ್ನ ಸಹೋದರ ಜಗನಾಥ ರೆಡ್ಡಿ ಸದರಿ 7 ಎಕರೆ 7 ಗುಂಟೆ ಜಮೀನನ್ನು ಭಾಗ ಮಾಡಿಕೊಂಡೆವು ಎಂದರೆ ಸರಿಯಲ್ಲ. ಸದರಿ ಭಾಗದಲ್ಲಿ ನನಗೆ 3 ಎಕರೆ 23 ಗುಂಟೆ ಮತ್ತು ಜಗನಾಥ ರೆಡ್ಡಿಗೆ 3 ಎಕರೆ 24 ಗುಂಟೆ ಬಂತು ಎಂದರೆ ಸರಿಯಲ್ಲ. ನನ್ನ ತಾಯಿ ಹೆಸರಿನಲ್ಲಿದ್ದ ಜಮೀನನ್ನು ನನ್ನ ಹೆಸರಿಗೆ ಮತ್ತು ನನ್ನ ಸಹೋದರ ಜಗನ್ನಾಥ ರೆಡ್ಡಿ ಹೆಸರಿಗೆ ಮಾಡುವಂತೆ ನಾವು ಯಾವತ್ತು ಅರ್ಜಿ ನೀಡಿಲ್ಲ. ನಾವು ಇಬ್ಬರು ಸೇರಿ ಅರ್ಜಿ ಕೊಟ್ಟ ಮೇರೆಗೆ ತಹಶೀಲ್ದಾರ ಮುಟೇಷನ ನಂ. 9 ದಿಃ 17-05-1990 ರ ಪ್ರಕಾರ ನಮ್ಮ ಹೆಸರಿಗೆ ಮುಟೇಷನ ಮಂಜೂರು ಮಾಡಿದರು ಎಂದರೆ ಸರಿಯಲ್ಲ. 1990 ರಿಂದ ಸದರಿ ಜಮೀನುಗಳು ನನ್ನ ಹೆಸರಿಗೆ ಮತ್ತು ಜಗನ್ನಾಥ ರೆಡ್ಡಿ ಹೆಸರಿಗೆ ಬರುತ್ತಿವೆ ಎಂದರೆ ಸರಿಯಲ್ಲ.

ದಿಃ 19-07-1972 ರಂದು ಚಿನ್ನ ನರಸರೆಡ್ಡಿ ತಂದೆ ನಾಗಪ್ಪ ಗದ್ದಿಮನಿ ಸರ್ವೆ ನಂ. 119 ರಲ್ಲಿನ 7 ಎಕರೆ 6 ಗುಂಟೆ ಮತ್ತು ಸರ್ವೆ ನಂ. 121 ರಲ್ಲಿನ 5 ಎಕರೆ ಜಮೀನನ್ನು 1 ನೇ ಪ್ರತಿವಾದಿಗೆ ರೂ. 20,000/- ಗಳಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಮಾರಾಟದ ಪ್ರಕಾರ 1972 ರಲ್ಲಿ 1 ನೇ ಪ್ರತಿವಾದಿ ಹೆಸರಿಗೆ ಮುಟೇಷನ ಆಯಿತು ಎಂದರೆ ಸರಿಯಲ್ಲ. ಸರ್ವೆ ನಂ. 119 ರ ಜಮೀನು 1972 ರಿಂದ 1981 ರವರೆಗೆ 1 ನೇ ಪ್ರತಿವಾದಿ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. 1981 ರಲ್ಲಿ 2 ಎಕರೆ 6 ಗುಂಟೆ ಜಮೀನನ್ನು 1 ನೇ ಪ್ರತಿವಾದಿ ಹೆಂಡತಿ ಯಲ್ಲಮ್ಮಳ ಹೆಸರಿಗೆ ಮುಟೇಷನ ಮಾಡಿಸಿದ ಎಂದರೆ ಸರಿಯಲ್ಲ. ಸದರಿ ಜಮೀನು 2005 ರ ವರೆಗೆ ಯಲ್ಲಮ್ಮಳ ಹೆಸರಿನಲ್ಲಿತ್ತು, ಅವಳು ತೀರಿಹೋದ ನಂತರ ಮರಳಿ ಮತ್ತೆ 1 ನೇ ಪ್ರತಿವಾದಿ ಹೆಸರಿಗೆ ಮುಟೇಷನ ಆಗಿದೆ ಎಂದರೆ ಸರಿಯಲ್ಲ. 2005 ರಿಂದ 2013 ರವರೆಗೆ ಸರ್ವೆ ನಂ. 119 ರ ಪಹಣಿಗಳ ಕಾಲಂ 9 ಮತ್ತು 12 ರಲ್ಲಿ 1 ಪ್ರತಿವಾದಿ ಹೆಸರು ಬರುತ್ತಿದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 2013 ರಲ್ಲಿ ಸರ್ವೆ ನಂ. 119 ರಲ್ಲಿನ ಸ್ವತ್ತನ್ನು 2 ನೇ ಪ್ರತಿವಾದಿಗೆ ನೋಂದಾಯಿತ ಹಕ್ಕು ಬಿಡುಗಡೆ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ 2013 ರಿಂದ ಇಲ್ಲಿಯವರೆಗೆ ಪಹಣಿಗಳಲ್ಲಿ 2 ನೇ ಪ್ರತಿವಾದಿ ಹೆಸರು ಬರುತಿದ್ದು ಅವರೇ ಸದರಿ ಸ್ವತ್ತಿನ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಗ್ರಾಮ ಸೇವಕರು ಮತ್ತು ಗ್ರಾಮ ಲೆಕ್ಕಾಧಿಕಾರಿ ಕಬ್ಜಾದಲ್ಲಿ ಯಾರು ಇದ್ದಾರೆ ಎಂದು ಸ್ವತಃ ತಿಳಿದುಕೊಂಡು ಕಾಲಂ ನಂ. 12 ರಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವರ್ಷ ಬೆಳೆಯನ್ನು ಕೂಡ ಪಹಣಿಯಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ.

1 ನೇ ಪ್ರತಿವಾದಿ ಸರ್ವೆ ನಂ. 121 ರಲ್ಲಿನ 5 ಎಕರೆ ಜಮೀನನ್ನು 1981 ರಲ್ಲಿ 3 ನೆ ಪ್ರತಿವಾದಿ ಹೆಸರಿಗೆ ಮುಟೇಷನ ಮಾಡಿಸಿದ ಎಂದರೆ ಸರಿಯಲ್ಲ. 1981 ರಿಂದ ಇಲ್ಲಿಯವರೆಗೆ ಸದರಿ ಸ್ವತ್ತಿನ ಪಹಣಿಗಳಲ್ಲಿ 3 ನೇ ಪ್ರತಿವಾದಿ ಹೆಸರು ಬರುತ್ತಿದೆ ಎಂದರೆ ಸರಿಯಲ್ಲ.

1972 ರಿಂದ ಸರ್ವೆ ನಂ. 119 ಮತ್ತು 121 ರಲ್ಲಿನ ಜಮೀನುಗಳ ಕಂದಾಯ ದಾಖಲಾತಿಗಳಲ್ಲಿ ಪ್ರತಿವಾದಿಯರ ಹೆಸರುಗಳು ಬರುತ್ತಿದ್ದು ಅಂದಿನಿಂದ ಅವರೆ ಸ್ವಾಧಿನದಲ್ಲಿದ್ದಾರೆ ಎಂದರೆ ಸರಿಯಲ್ಲ. ಕಳೆದ ಸುಮಾರು 50 ವರ್ಷಗಳಿಂದ ಅವರು ಹೆಸರಿಗೆ ಪಹಣಿ ಬರುತ್ತಿವೆ ಎಂದರೆ ಸರಿಯಲ್ಲ. 1972 ರ ಮುಟೇಷನನ್ನು ಪ್ರಶ್ನಿಸಿ ನನ್ನ ತಂದೆ AC ರವರ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅಪೀಲು ವಜಾ ಆಗಿದೆ ಎಂದರೆ ಸರಿ. ಅದನ್ನು ಪ್ರಶ್ನಿಸಿ ಜಿಲ್ಲಾಧಿಕಾರಿಗಳ ಮುಂದೆ ಅಪೀಲು ಸಲ್ಲಿಸಿದ್ದೆವು ಅದು ಕೂಡ ವಜಾ ಆಗಿದೆ

ಎಂದರೆ ಸರಿ. ಸರ್ವೆ ನಂ. 119 ರಲ್ಲಿ 7 ಎಕರೆ 6 ಗುಂಟೆ ಜಮೀನು ಆದ ನಂತರ ನಮ್ಮ ಮತ್ತು ಪ್ರತಿವಾದಿಯರ ಜಮೀನುಗಳ ನಡುವೆ ಒಂದು ಒಡ್ಡು ಇದೆ ಎಂದರೆ ಮುಂಚೆ ಇರಲಿಲ್ಲ ರಾತ್ರೋರಾತ್ರಿ 4 ವರ್ಷಗಳ ಹಿಂದ ಒಡ್ಡು ಹಾಕಿದ್ದಾರೆ ಎಂದು ಹೇಳುತ್ತಾರೆ. ಸದರಿ ಒಡ್ಡು 1972 ರಂದ ಇದ್ದು 4 ವರ್ಷಗಳ ಹಿಂದೆ ಹಾಕಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕದ್ದುಮುಚ್ಚಿ ಪ್ರತಿವಾದಿಯರು ರಾತ್ರಿ ಒಡ್ಡು ಹಾಕಿದ್ದಾರೆ ಎಂದು ಅವರ ವಿರುದ್ಧ ಪೋಲಿಸರಿಗೆ ದೂರು ನೀಡಿಲ್ಲ.

**(ಶ್ರೀ BSS ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.